ಕನ್ನಡ ಪೋಸ್ಟ್
ಇದು ಸುದ್ದಿ ವಿಳಾಸ
KANNADA POST
ಕನ್ನಡ ದಿನ ಪತ್ರಿಕೆ Kannada Daily
ಸಂಪಾದಕ : ಮಂಜು ಬನವಾಸೆ
ಹಾಸನ E-mail : kannadapostnews@gmail.com / ಕನ್ನಡ post Price: ₹1
Vol.No.01 | Issue. 222 | Pages. 2 | Date: 13-07-2025, SUNDAY RNI NO: KARKAN/2024/89601
ಸಂಪುಟ : 01 - ಸಂಚಿಕೆ : 222 - ಪುಟಗಳು : 2 - 13 ಜುಲೈ 2025 ಭಾನುವಾರ Ph: 8762954248 ದರ : ₹1

# ಚಿಕ್ಕಮಗಳೂರು-ತಿರುಪತಿ ರೈಲಿಗೆ ಬಾಬಾ ಬುಡನ್ ಹೆಸರಿಡಿ

## ಸೂಫಿ ಸಂತನ ವಂಶಸ್ಥರಿಂದ ಕೇಂದ್ರಕ್ಕೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚಿಕ್ಕಮಗಳೂರು : ಚಿಕ್ಕಮಗಳೂರು ಮತ್ತು ತಿರುಪತಿ ನಡುವೆ ಶುಕ್ರವಾರ ಸಂಚಾರ ಆರಂಭಿಸಿದ ಸಾಪ್ತಾಹಿಕ ಎಕ್ಸ್ ಪ್ರೆಸ್ ರೈಲಿಗೆ ಸೂಫಿ ಸಂತ ಹಾಗೂ ಕಾಫಿ ಕೃಷಿಯ ಪ್ರವರ್ತಕ ಹಝ್ರತ್ ಬಾಬಾ ಬುಡನ್ ಗೌರವಾರ್ಥವಾಗಿ ಬಾಬಾ ಬುಡನ್ ಎಕ್ಸ್ ಪ್ರೆಸ್'' ಎಂದು ನಾಮಕರಣ ಮಾಡುವಂತೆ ಒತ್ತಾಯಿಸಿ ಬಾಬಾ ಬುಡನ್ ವಂಶಸ್ಥರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.



**ಮನವಿಯ ವಿವರ**

ಪ್ರಧಾನಮಂತ್ರಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಬರೆದಿರುವ ಮನವಿಯಲ್ಲಿ, ಈ ರೈಲಿಗೆ ಬಾಬಾ ಬುಡನ್ ಎಕ್ಸ್ ಪ್ರೆಸ್ ಎಂದು ಹೆಸರಿಡಲು ಸಯ್ಯದ್ ಫಕ್ರುದ್ದೀನ್ ಶಾ ಖಾದ್ರಿ ಮತ್ತು ಬಾಬಾ ಬುಡನ್ ವಂಶಸ್ಥರು ಒತ್ತಾಯಿಸಿದ್ದಾರೆ.

**ಬಾಬಾ ಬುಡನ್ ಎಕ್ಸ್ ಪ್ರೆಸ್ ಏಕೆ?**

**1. ಕಾಫಿ ಕೃಷಿಯ ಪ್ರವರ್ತಕ:**

17ನೇ ಶತಮಾನದಲ್ಲಿ ಯೆಮೆನ್ ನಿಂದ ಏಳು ಕಾಫಿ ಬೀಜಗಳನ್ನು ತಂದು ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ ಬೆಟ್ಟದಲ್ಲಿ ನೆಟ್ಟು, ಭಾರತದಲ್ಲಿ ಕಾಫಿ ಕೃಷಿಯ ಆರಂಭಕ್ಕೆ ಕಾರಣರಾದವರು ಬಾಬಾ ಬುಡನ್. ಇದರಿಂದ ಚಿಕ್ಕಮಗಳೂರು ಇಂದು ಭಾರತದ ಕಾಫಿ ತವರಾಗಿ ಹೆಸರಾಗಿದೆ.

**2. ಸೂಫಿ ಸಂತ ಮತ್ತು ಐಕ್ಯತೆಯ ಸಂಕೇತ:**

ಬಾಬಾ ಬುಡನ್ (ರಹ) ಎಲ್ಲ ಸಮುದಾಯಗಳಿಂದ ಗೌರವಿಸಲ್ಪಡುವ ಆಧ್ಯಾತ್ಮಿಕ ಗುರು. ಅವರ ಶಾಂತಿ, ಪ್ರೀತಿ ಮತ್ತು ಸಹಬಾಳ್ವೆಯ ಸಂದೇಶವು ಸೂಫಿ ತತ್ವವನ್ನು ಪ್ರತಿಬಿಂಬಿಸುತ್ತದೆ. ಈ ರೈಲಿಗೆ ಅವರ ಹೆಸರಿಡುವುದು ಭಾರತದ ಸಾಮರಸ್ಯ ಸಂಸ್ಕೃತಿಗೆ ಗೌರವ ಸಲ್ಲಿಸುವಂತಾಗುತ್ತದೆ.

**3. ಚಿಕ್ಕಮಗಳೂರಿನ ಹೆಮ್ಮೆ**

ಕಾಫಿ ಕೃಷಿಯ ಜೊತೆಗೆ ಚಿಕ್ಕಮಗಳೂರು ಒಂದು ಪ್ರವಾಸಿ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿದೆ. ಆಬಾಬಾ ಬುಡನ್ ಎಕ್ಸ್ ಪ್ರೆಸ್' ಎಂಬ ಹೆಸರು ಸ್ಥಳೀಯರಿಗೆ ಹೆಮ್ಮೆ ತಂದು, ಕಾಫಿ ಪರಂಪರೆಯನ್ನು ಜಾಗತಿಕವಾಗಿ ಪ್ರಚಾರಗೊಳಿಸುತ್ತದೆ.

**4. ಸಾಂಸ್ಕೃತಿಕ ಸೇತುವೆ**

ಬಾಬಾ ಬುಡನ್‌ಗಿರಿ ಮತ್ತು ತಿರುಪತಿಯಂತಹ ಆಧ್ಯಾತ್ಮಿಕ ಕೇಂದ್ರಗಳ ಈ ರೈಲು ಸಂಪರ್ಕವು ಕರ್ನಾಟಕ ಮತ್ತು ಆಂಧ್ರಪ್ರದೇಶದ ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸುತ್ತದೆ. ಈ ಹೆಸರು ಪ್ರವಾಸಿಗರು, ಯಾತ್ರಿಕರು ಮತ್ತು ಕಾಫಿ ಪ್ರಿಯರಿಗೆ ಚಿರಪರಿಚಿತವಾಗಿದೆ.

ಈ ರೈಲಿಗೆ ಬಾಬಾ ಬುಡನ್ ಎಕ್ಸ್ ಪ್ರೆಸ್ ಎಂದು ಹೆಸರಿಡುವುದು ಕಾಫಿ ಕೃಷಿಯ ಪ್ರವರ್ತಕರಿಗೆ, ಭಾರತದ ಸೂಫಿ ಪರಂಪರೆಗೆ ಮತ್ತು ಚಿಕ್ಕಮಗಳೂರಿನ ಐತಿಹಾಸಿಕ ಹೆಮ್ಮೆಗೆ ಗೌರವ ಸಲ್ಲಿಸುವ ನಡೆಯಾಗಲಿದೆ. ಇದು ಪ್ರಧಾನಮಂತ್ರಿಯವರ ಭಾರತದ ಸಾಮರಸ್ಯ ಆಧ್ಯಾತ್ಮಿಕ ಪರಂಪರೆಗೆ ಮತ್ತು ಅಪ್ರಚಲಿತ ನಾಯಕರನ್ನು ಗೌರವಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಮನವಿಯಲ್ಲಿ ಹೇಳಿದ್ದಾರೆ.

# ಕಡೆಗೂ ಸೆರೆ ಸಿಕ್ಕ ಕುರಿಭಕ್ಷಕ ಚಿರತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ : ಸಾರ್ವಜನಿಕರಿಗೆ ಮತ್ತು ಜಾನುವಾರುಗಳ ಪ್ರಾಣಕ್ಕೆ ಕಂಟಕವಾಗಿ ಆತಂಕ ಸೃಷ್ಟಿ ಮಾಡಿದ್ದ ಒಂದೂವರೆ ವರ್ಷದ ಹೆಣ್ಣು ಚಿರತೆಯನ್ನು ಕೊನೆಗೂ ಸೆರೆ ಹಿಡಿಯಲಾಗಿದೆ.



ತಾಲೂಕಿನ ಹಳೇಕೋಟೆ ಹೊಬಳಿಯ ಸಿಗರನಹಳ್ಳಿ ಗ್ರಾಮದ ಸುತ್ತಮುತ್ತ ಕಳೆದ ಹಲವು ದಿನಗಳಿಂದ ಈ ಚಿರತೆ ಸಾಕಷ್ಟು ಉಪಟಳ ನೀಡುತ್ತಿತ್ತು.

ಇದು ನಿರಂತರ ದಾಳಿ ಮಾಡುತ್ತಾ ಜಾನುವಾರು, ಮೇಕೆ, ನಾಯಿಗಳನ್ನು ತಿಂದು ಹಾಕುತ್ತಿತ್ತು. ಎಷ್ಟೋ ಸಂದರ್ಭ ಹಗಲು ವೇಳೆಯಲ್ಲೇ ದಾಳಿ ಮಾಡುತ್ತಿದ್ದ ಚಿರತೆ, ಎದುರಿಗೆ ಸಿಕ್ಕ ಪ್ರಾಣಿಗಳನ್ನು ಕೊಂದು ರಕ್ತ ಕುಡಿಯುತ್ತಿತ್ತು.

ಒಂದು ವಾರದಲ್ಲಿ ಏಳು ಜಾನುವಾರು, ಮೇಕೆ ಹಾಗೂ ನಾಯಿಗಳನ್ನು ತಿಂದು ಹಾಕಿತ್ತು. ಗ್ರಾಮದ ಸಮೀಪವೇ ಹಗಲು, ರಾತ್ರಿ ವೇಳೆ ಕಾಣಿಸಿಕೊಳ್ಳುವ ಮೂಲಕ ಸಾಕಷ್ಟು ಆತಂಕ ತಂದೊಡ್ಡಿತ್ತು. ಕೆಲಮೊಮ್ಮೆ ಮನೆ ಬಳಿಯೇ ಬಂದು ಜಾನುವಾರು, ಮೇಕೆ, ಕುರಿ ಹಾಗೂ ನಾಯಿಗಳನ್ನು ಚಿರತೆ ಹೊತ್ತೊಯ್ಯುತ್ತಿತ್ತು. ಇದರಿಂದ ದೊಡ್ಡ ಮಟ್ಟದಲ್ಲಿ ಆತಂಕಗೊಂಡಿದ್ದ ಸ್ಥಳೀಯರು, ಕೂಡಲೇ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು.

ಅದರಂತೆ ಅರಣ್ಯ ಇಲಾಖೆಯವರು ಬೋನು ಇಟ್ಟಿದ್ದರು. ಸಿಗರನಹಳ್ಳಿ ಗ್ರಾಮದ ರವಿ ಎಂಬುವರ ಮನೆ ಹತ್ತಿರ ಇಟ್ಟಿದ್ದ ಬೋನಿಗೆ ಹೆಣ್ಣು ಚಿರತೆ ಇಂದು ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ಸೆರೆಯಾಗಿದೆ.

ಇದರಿಂದ ಸಿಗರನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ನೆಮ್ಮದಿ ನಿಟ್ಟುಸಿರು ಬಿಟ್ಟಿದ್ದಾರೆ.

ಸೆರೆ ಸಿಕ್ಕ ಚಿರತೆಯನ್ನು ಅರಣ್ಯ ಇಲಾಖೆಯವರು ಹಾಸನದ ಗೆಂಡೆಕಟ್ಟೆ ವನ್ಯಧಾಮದಲ್ಲಿ ರಕ್ಷಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

# ಸಕಲೇಶಪುರ ಎಆರ್‌ಟಿಓ ಕಚೇರಿಯಲ್ಲಿ ದಲ್ಲಾಳಿಯ ಹುಟ್ಟುಹಬ್ಬ ಆಚರಣೆ: ಸಾರ್ವಜನಿಕರಿಂದ ತೀವ್ರ ಖಂಡನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ, ಜುಲೈ 12: ಎಆರ್‌ಟಿಓ ಕಚೇರಿಯಲ್ಲಿ ಸಾರ್ವಜನಿಕರ ಕೆಲಸಗಳನ್ನು ವೇಗವಾಗಿ ಮುಗಿಸಿ ಕೊಡಿಸುವ ನೆಪದಲ್ಲಿ ಕೆಲಸ ಮಾಡುತ್ತಿರುವ ದಲ್ಲಾಳಿಯೊಬ್ಬನು ಅಧಿಕಾರಿಗಳ ಸಮ್ಮುಖದಲ್ಲೇ ಹುಟ್ಟುಹಬ್ಬ ಆಚರಿಸಿಕೊಂಡ ಘಟನೆ ವಿವಾದಕ್ಕೆ ಕಾರಣವಾಗಿದೆ.

ಮೋಹನ್ ಕುಮಾರ್ ಎಂಬ ದಲ್ಲಾಳಿಯು ಸಕಲೇಶಪುರದ ಎಆರ್‌ಟಿಓ ಕಚೇರಿಯ ಎಆರ್‌ಟಿಓ ಮಧುರ ಹಾಗೂ ಇತರ ಸಿಬ್ಬಂದಿಗಳ ಸಮ್ಮುಖದಲ್ಲಿ ತನ್ನ ಜನ್ಮದಿನವನ್ನು ಕೇಕ್ ಕತ್ತರಿಸಿ ಸಂಭ್ರಮದಿಂದ ಆಚರಿಸಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸಾರ್ವಜನಿಕ ವಲಯದಲ್ಲಿ ಭಾರೀ ಆಕ್ರೋಶ ಹುಟ್ಟಿಸಿದೆ.

ಹಿಂದಿನಿಂದಲೂ ಎಆರ್‌ಟಿಓ ಕಚೇರಿಯಲ್ಲಿ ದಲ್ಲಾಳಿಗಳ ಹಾವಳಿ ಇದ್ದು, ಸಾರ್ವಜನಿಕರಿಂದ ಲಂಚ ಪಡೆದು ಅಧಿಕಾರಿಗಳಿಗೆ ತಲುಪಿಸುವ ಗಂಭೀರ ಆರೋಪಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ, ಇಂತಹ ವರ್ತನೆ ಕಚೇರಿ ಶಿಸ್ತಿಗೆ ಕಳಂಕ ಎಸೆದುಕೆಡವುವಂತದ್ದೆಂದು ಸಾರ್ವಜನಿಕರು ಕಿಡಿಕಾರಿದ್ದಾರೆ.

ಇದು ಸಾರ್ವಜನಿಕ ಕಚೇರಿ. ಇಲ್ಲಿ ಸಂಬಂಧವಿಲ್ಲದ ದಲ್ಲಾಳಿಯ ಹುಟ್ಟುಹಬ್ಬವನ್ನು ಆಚರಿಸುವುದು ಅಪರಾಧ. ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಬೇಕು. ಇಲ್ಲವಾದರೆ ನಾವು ಸಹ ಅಲ್ಲಿ ಹೋಗಿ ಕಚೇರಿಗೆ ಹೋಗಿ ನಮ್ಮ ಕಾರ್ಯಕರ್ತರು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತೇವೆ ಎಂದು ಕನ್ನಡ ಪರ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ

# ನೋಟ್ ಪುಸ್ತಕಗಳ ವಿತರಣಾ ಕಾರ್ಯಕ್ರಮ



ಚನ್ನರಾಯಪಟ್ಟಣ: ಸರ್ಕಾರದ ಸೌಲಭ್ಯಗಳ ಜೊತೆಗೆ ದಾನಿಗಳ ಸಹಕಾರ ಪಡೆದು ಸರ್ಕಾರಿ ಶಾಲೆಗಳ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎ. ಪ್ರಮೋದ್ ಹೇಳಿದರು.

ತಾಲೂಕಿನ ಹಿರೀಸಾವೆ ಗ್ರಾಮದ ಪಿಎಂಶ್ರೀ ಶಾಸಕರ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಎಚ್ ಪಿಬಿಎಸ್ ಶಾಲೆಗಳ 250 ವಿದ್ಯಾರ್ಥಿಗಳಿಗೆ ಶಿವು ಟ್ರೇಡರ್ಸ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ನೋಟ್ ಪುಸ್ತಕಗಳ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಿರಿಯ ವಿದ್ಯಾರ್ಥಿಗಳು, ವ್ಯಾಪಾರಸ್ಥರು ಹೆಚ್ಚಿನ ಸಹಕಾರ ನೀಡಬೇಕು, ಶೈಕ್ಷಣಿಕ ವ್ಯವಸ್ಥೆಗೆ ಅಗತ್ಯ ಇರುವ ಕಂಪ್ಯೂಟರ್ ಸೇರಿದಂತೆ ತಂತ್ರಜ್ಞಾನದ ಉಪಕರಣಗಳು ನೀಡಬೇಕು ಎಂದರು.

ಟ್ರೇಡರ್ಸ್ ಮಾಲೀಕ ಶಿವು ಮಾತನಾಡಿ, ಕಬ್ಬಿಣ ಮಾರಾಟದ ಕಂಪನಿಗಳ ಸಹಕಾರ ಪಡೆದು, ಮಕ್ಕಳ ವಿದ್ಯಾಭ್ಯಾಸಕ್ಕೆ ನೋಟ್ ಪುಸ್ತಕಗಳನ್ನು ನೀಡುತ್ತಿದ್ದೇವೆ. ವಿದ್ಯಾರ್ಥಿಗಳು ಉತ್ತಮವಾಗಿ ಓದುವಂತೆ ಹೇಳಿದರು. ಶಾಲೆಗಳ ಮುಖ್ಯ ಶಿಕ್ಷಕರುಗಳಾದ ಉಮಾದೇವರಾಜು, ಚಂದ್ರಕಲಾ, ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷರ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಹಿರಿಯಣ್ಣ, ಎರಡು ಶಾಲೆಗಳ ಎಸ್ ಡಿಎಂಸಿ ಅಧ್ಯಕ್ಷರಾದ ಮಂಜುನಾಥ್, ಮೌರ್ಯ, ಮಧು, ಸದಸ್ಯರು ಸೇರಿದಂತೆ ಹಿರಿಯ ವಿದ್ಯಾರ್ಥಿಗಳು, ಶಾಲೆ ಶಿಕ್ಷಕರು ಇದ್ದರು.

# ರೈತನಿಗೆ ಹೃದಯಾಘಾತ ಹೊಲದಲ್ಲೇ ಸಾವು



ಬೇಲೂರು : ಹಗರೆ ಸಮೀಪದ ಗ್ರಾಮದ ತೆಂಡಿಗೆರೆಯಲ್ಲಿ ಚಂಡು ಹೂವಿನ ಜಮೀನಿನಲ್ಲಿ ಚರಂಡಿ ಸ್ವಚ್ಛಗೊಳಿಸುವ ವೇಳೆ ಹೃದಯಾಘಾತದಿಂದ ರೈತರೊಬ್ಬರು ಕುಸಿದು ಬಿದ್ದು ಮೃತಪಟ್ಟ ಘಟನೆ ಶುಕ್ರವಾರ ಸಂಜೆ ನಡೆದಿದೆ. ಮಾದೀಹಳ್ಳಿ ಹೊಬಳಿಯ ತೆಂಡಿಗೆರೆ ಗ್ರಾಮದ ಸಿದ್ದಲಿಂಗಪ್ಪ (ಮುತ್ತಣ್ಣ) (64) ಮೃತ ರೈತ. ಇವರು ಶುಕ್ರವಾರ ಸಂಜೆ ತಮ್ಮ ಮೊಮ್ಮಗನನ್ನು ಹನಿಕೆ ಸರ್ಕಾರಿ ಶಾಲೆಯಿಂದ ಬೈಕ್‌ನಲ್ಲಿ ಮನೆಗೆ ಕರೆತಂದು ಬಿಟ್ಟ ನಂತರ, ಊರಿನ ಸಮೀಪದ ಚಂಡು ಹೂವಿನ ಹೊಲಕ್ಕೆ ತೆರಳಿ ನೀರು ಹರಿಯುವ ಚರಂಡಿಯನ್ನು ಸ್ವಚ್ಛಗೊಳಿಸುತ್ತಿದ್ದರು. ಈ ವೇಳೆ ಇದ್ದಕ್ಕಿದ್ದಂತೆ ಕುಸಿದು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮದ ರಾಜಣ್ಣ ಎಂಬವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಹೃದಯಾಘಾತದಿಂದ ಸಿದ್ದಲಿಂಗಪ್ಪ ಮೃತಪಟ್ಟಿರುವುದು ದೃಢಪಟ್ಟಿದೆ.

## ಯಶಸ್ವಿ ಪ್ರದರ್ಶನ ಕಂಡು ಪ್ರೇಕ್ಷಕರನ್ನು ರಂಜಿಸಿದ ಮಾಯಾಮೃಗ-ಎದೆಯ ಹಣತೆ ನಾಟಕ

# ಮಹಿಳೆಗೆ ಇನ್ನೂ ನಿರೀಕ್ಷಿತ ಗೌರವ ಸಿಕ್ಕಿಲ್ಲ:ಡಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಸ್ತುತ ನಾವು ಮಹಿಳೆಯರಾಗಿ ಚೆನ್ನಾಗಿ ಓದಿದ್ದೇವೆ, ಆರ್ಥಿಕವಾಗಿ ಸಬಲರಾಗಿದ್ದೇವೆ. ಎಲ್ಲಾ ಪಡೆದು ಬಿಟ್ಟಿದ್ದೇವೆ ಎನ್ನುವುದು ಏನೂ ಇಲ್ಲ. ಈಗಲೂ ಮಹಿಳೆಗೆ ಸಿಗಬೇಕಾದ ಗೌರವ ಇನ್ನು ಸಂಪೂರ್ಣವಾಗಿ ಸಿಕ್ಕಿಲ್ಲ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹೇಳಿದರು.



ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ರಂಗಸಿರಿ ಆಶ್ರಯದಲ್ಲಿ ಜನಮನದಾಟ ತಂಡಗಳು ಶುಕ್ರವಾರ ಸಂಜೆ ಅಭಿನಯಿಸಿದ ಮಾಯಾಮೃಗ, ಎದೆಯ ಹಣತೆ ನಾಟಕಗಳ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮತ್ತು ಅಂತಾರಾಷ್ಟ್ರೀಯ ಬೂಕರ್

ಪ್ರಶಸ್ತಿ ಪುರಸ್ಕೃತರಾದ ಬಾನುಮುಷ್ತಾಕ್ ಅವರನ್ನು ಅಭಿನಂದಿಸಿ ಮಾತನಾಡಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದವರ ಜೊತೆ ನಾವು ಕುಳಿತಿದ್ದೇವೆ ಎಂದರೆ ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ರಂಗಸಿರಿಯ ಎಲ್ಲ ಸದಸ್ಯರು ಇಂತಹ ಒಳ್ಳೆಯ ಕಾರ್ಯಕ್ರಮ ಆಯೋಜನೆ ಮಾಡಿದ್ದು, ಇಂತಹ ಕಾರ್ಯಕ್ರಮವವನ್ನು ಹೆಚ್ಚಿನ ರೀತಿ ಮಾಡಬೇಕು ಎಂದರು.

ಪ್ರತಿಯೊಬ್ಬ ಮಹಿಳೆಯಲ್ಲೂ ಹೋರಾಟಗಾರ್ತಿ ಇರುತ್ತಾಳೆ. ಬಾನು ಮುಷ್ತಾಕ್ ಅವರದು ನನಗೆ ನಾಟಿರುವುದು ಅವರ ಹೋರಾಟದ ಬದುಕು. ಅವರ ಕಥೆ, ಪಾತ್ರವನ್ನ ನೋಡುತ್ತಾ ಹೋದರೆ ಅವುಗಳ ವೇದನೆ, ಹೋರಾಟಗಳು ತಿಳಿಯುತ್ತ ಹೋಗುತ್ತವೆ ಎಂದರು.

ಅವರ ಬರಹ ನಮಗೆ ಕಥೆ ಅನಿಸುವುದಿಲ್ಲ. ಜೀವಂತ ವ್ಯಕ್ತಿತ್ವ ಅನಿಸಿ ಬಿಡುತ್ತದೆ. ಓದುತ್ತಾ ಹೋದರೆ ಅದರಲ್ಲಿ ನಮ್ಮದೂ ಒಂದು ಪಾತ್ರ ಇದೆ ಅನಿಸುತ್ತದೆ.

ಒಬ್ಬ ಬರಹಗಾರ್ತಿಯಾಗಿ, ಪತ್ರಿಕೋದ್ಯಮಿಯಾಗಿ ಹಾಗೂ ವಕೀಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಾವು ಮಹಿಳೆಯರಾಗಿ ಚೆನ್ನಾಗಿ ಓದಿದ್ದೇವೆ, ಆರ್ಥಿಕವಾಗಿ ಸಬಲರಾಗಿದ್ದೇವೆ. ಎಲ್ಲಾ ಪಡೆದುಬಿಟ್ಟಿದ್ದೇವೆ ಎನ್ನುವುದು ಎಂತಹುದೂ ಇಲ್ಲ. ಈಗಲೂ ಹೇಳುತ್ತೇವೆ, ಮಹಿಳೆಗೆ ಸಿಗಬೇಕಾದ ಗೌರವದಲ್ಲಿ ಇನ್ನು ಸಂಪೂರ್ಣವಾಗಿ ಸಿಕ್ಕಿಲ್ಲ, ಸಮಾನತೆ ಎಂಬುದು ದೂರದ ಮಾತಾಗಿದೆ, ಅವಕಾಶ ಕೇಳಲೇಬೇಡಿ ಎಂದು ಬೇಸರ ವ್ಯಕ್ತಪಡಿಸಿದರು. ಈ ಎಲ್ಲಾ ಕೊರತೆಗಳ ನಡುವೆಯೂ ಸಹ ಹೆಣ್ಣನ್ನು, ಹೆಣ್ಣಿನ ವ್ಯಕ್ತಿತ್ವವನ್ನು ಪ್ರತಿಪಾದಿಸುವ ಒಂದು ಉತ್ತಮ ವ್ಯಕ್ತಿತ್ವ ನಮ್ಮ ಜೊತೆ ಇದ್ದಾರೆ ಎನ್ನುವುದೇ ಒಂದು ಹೆಮ್ಮೆಯ ವಿಷಯ ಎಂದು ಕಿವಿಮಾತು ಹೇಳಿದರು. ಎಲ್ಲರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಯಾಮೃಗ ನಾಟಕವನ್ನು ರಂಜಿತ್ ಶೆಟ್ಟಿ ಕುಕ್ಕುಡೆ ನಿರ್ದೇಶನ ಮಾಡಿದ್ದು, ಎದೆಯ ಹಣತೆ ನಾಟಕವನ್ನ ಡಾ. ಎಂ. ಗಣೇಶ್ ಹೆಗ್ಗೋಡು ನಿರ್ದೇಶನ ಮಾಡಿದ್ದರು.

ಎರಡೂ ನಾಟಕಗಳು ಯಶಸ್ವಿಯಾಗಿ ಪ್ರದರ್ಶನಗೊಂಡವು. ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದವು.

ಇದೇ ವೇಳೆ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷ ಟಿ.ವಿ.ಶಿವಾನಂದ ತಗಡೂರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಭಾಪತಿ ಮೋಹನ್ ಹೆಮ್ಮಿಗೆ, ಅಮೋಘ ಸುದ್ದಿ ವಾಹಿನಿ ಮುಖ್ಯಸ್ಥ ಕೆ.ಪಿ.ಎಸ್. ಪ್ರಮೋದ್, ಎವಿಸ್ಪಿ ವೆಂಕಟೇಶ್ ನಾಯ್ಡು, ರಂಗಸಿರಿ ಕಾರ್ಯದರ್ಶಿ ಶಾಡ್ರಾಕ್, ರಂಗಸಿರಿ ಹಿರಿಯ ಕಲಾವಿದ ಜವರಯ್ಯ, ಖಜಾಂಚಿ ಡಿ.ಎಸ್. ಲೋಕೇಶ್, ಅಧ್ಯಕ್ಷ ರಂಗಸ್ವಾಮಿ, ಜಿಲ್ಲಾ ಕಸಾಪ ಮಾಜಿ ಗೌರವಾಧ್ಯಕ್ಷ ರವಿನಾಕಲಗೂಡು ಸ್ವಾಗತಿಸಿದರು. ಲಕ್ಷ್ಮೀನಾರಾಯಣ್ ಕಾರ್ಯಕ್ರಮ ನಿರೂಪಿಸಿದರು.

# ಬಿಳಿಸುಳಿ ರೋಗದಿಂದ ಮೆಕ್ಕೆಜೋಳ ನಾಶ

## ಎಕರೆಗೆ ಕನಿಷ್ಠ 25 ಸಾವಿರ ಪರಿಹಾರ ನೀಡುವಂತೆ ಶಾಸಕ ಬಾಲಕೃಷ್ಣ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನಲ್ಲಿ ಪ್ರಸಕ್ತ ಸಾಲಿಗೆ ರೈತರು ಬೆಳೆಯ ಲಾಗಿರುವ ಮೆಕ್ಕಜೋಳಕ್ಕೆ ಬಿಳಿ ಸುಳಿ ರೋಗ ಬಾಧಿಸುತ್ತಿದ್ದು, ಲಕ್ಷಾಂತರ ರೂ. ನಷ್ಟ ಅನುಭವಿಸಿರುವ ರೈತರ ನೆರವಿಗೆ ಸರ್ಕಾರ ಮುಂದಾಗಬೇಕು. ಪ್ರತಿ ಎಕರೆಗೆ 25 ಸಾವಿರ ರೂ. ಪರಿಹಾರ ನೀಡಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಸರ್ಕಾರವನ್ನು ಆಗ್ರಹಿಸಿದರು.



ಕಸಬಾ ಹೋಬಳಿ ಕಲ್ಕೆರೆ ವಡ್ಡರಹಳ್ಳಿ ಬಳಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ನಾಶವಾಗಿರುವ ಮೆಕ್ಕೆಜೋಳ ವೀಕ್ಷಣೆ ಮಾಡಿ ಮಾತನಾಡಿದ ಅವರು, ಬಿಳಿ ಸುಳಿ ರೋಗದಿಂದ ರೈತರಿಗೆ ನಷ್ಟವಾಗುತ್ತಿದೆ ಎಂದರು.

ತಾಲ್ಲೂಕಿನಲ್ಲಿ 5395 ಹೆಕ್ಟೇರ್‌ನಲ್ಲಿ ಬಿತ್ತನೆ ಆಗಿ, 1200 ಹೆಕ್ಟೇರ್ ಪ್ರದೇಶದಲ್ಲಿ ರೋಗ ಕಾಣಿಸಿಕೊಂಡಿದೆ. ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಿಸುವ ಸಂಭವವಿದೆ. ಪ್ರತಿ ಎಕರೆ ಮೆಕ್ಕೆಜೋಳ ಬೆಳೆಯಲು 15-20 ಸಾವಿರ ಹಣ ವೆಚ್ಚ ಆಗಲಿದೆ.

ಬೆಳೆ ಉತ್ತಮವಾಗಿ ಬಂದರೆ 30 ಸಾವಿರ ಆದಾಯ ಪಡೆಯತ್ತಾರೆ. ಆದರೆ ಬಿಳಿ ಸುಳಿರೋಗ ಆದಾಯಕ್ಕೆ ಕುತ್ತು ತಂದಿದೆ. ಹಾಗಾಗಿ ರಾಜ್ಯ ಸರ್ಕಾರ ಎಕರೆಗೆ ಕನಿಷ್ಠ 25 ಸಾವಿರ ಪರಿಹಾರ ನೀಡಬೇಕು, ಈ ಬಗ್ಗೆ ಸೋಮವಾರ ನಡೆಯುವ ಜಿಲ್ಲಾ ಕೆಡಿಪಿ ಸಭೆಯಲ್ಲಿ ಜಿಲ್ಲಾ ಮಂತ್ರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

ಕೃಷಿ ಇಲಾಖೆಯಿಂದ ಪ್ರತಿ ಗ್ರಾಮಗಳಿಗೆ ಅಧಿಕಾರಿಗಳ ತಂಡ ಭೇಟಿ ನೀಡಿ, ಯಾವ ರೈತ ಮೆಕ್ಕೆಜೋಳ ಬೆಳೆ ಮಾಡಿದ್ದಾನೆ, ಎಷ್ಟು ಪ್ರದೇಶದಲ್ಲಿ ಬಿಳಿ ಸುಳಿ ರೋಗಕ್ಕೆ ಜೋಳ ಹಾಳಾಗಿದೆ ಎನ್ನುವುದನ್ನು ವರದಿ ತಯಾರು ಮಾಡಿ ಕೊಡಬೇಕು. ಈ ಬಗ್ಗೆ ಕೃಷಿ ಇಲಾಖೆ ಕೃಷಿ ವೆಬ್‌ಪೋರ್ಟ್‌ನಲ್ಲಿ ಸರ್ವೆ ನಂಬರ್ ಸಮೇತ ದಾಖಲು ಮಾಡಿದರೆ. ಸರ್ಕಾರ ನೇರವಾಗಿ ನಷ್ಟವಾಗಿರುವ ರೈತರ ಖಾತೆಗೆ ನಷ್ಟದ ಹಣ ತುಂಬಲು ಅನುಕೂಲ ಆಗುತ್ತದೆ ಎಂದರು.

ತಾವು ಕೃಷಿ ಮಂತ್ರಿ ಅವರನ್ನು ಭೇಟಿ ಆಗಿ ನಷ್ಟದ ಪ್ರಮಾಣ ವಿವರಿಸುವೆ, ಅಧಿವೇಶನದಲ್ಲೂ ದನಿ ಎತ್ತುವೆ ಎಂದರು.

ಪ್ರಸಕ್ತ ವರ್ಷ ಮಳೆ ಕಡಿಮೆಯಾಗಿದೆ. ಇಂತಹ ವೇಳೆಯಲ್ಲಿ ರೈತರು ಸಾಲ ಮಾಡಿ ಕೃಷಿ ಮಾಡಿದ್ದಾರೆ.

ಬೆಳೆ ಮಾಡಲು ರೈತರು ವೆಚ್ಚ ಮಾಡಿರುವ ಹಣವನ್ನಾದರೂ ಸರ್ಕಾರ ಭರಸಲಿ, ಇಲ್ಲದೆ ಹೋದರೆ ರೈತ ಸಾಲದ ಸುಳಿಗೆ ಸಿಲುಕಬೇಕಾಗುತ್ತದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಂಡ ರಚನೆ ಮಾಡಿ ರೈತರು ಅನುಭಸುತ್ತಿರುವ ಯಾತನೆ ಅಧ್ಯಯನ ಮಾಡಲಿ, ಈಗಾಗಲೆ ಬಿಳಿ ಸುಳಿ ರೋಗದ ಬಗ್ಗೆ ಕೃಷಿ ವಿಜ್ಞಾನಿಗಳು ಸಂಶೋಧನೆ ಮಾಡುತ್ತಿದ್ದಾರೆ, ವರದಿ ಬಂದ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಮೋಹನ್‌ಕುಮಾರ್, ಕಸಬಾ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಕಿರಣ್, ಆತ್ಮ ಯೋಜನೆ ತಾಲೂಕು ವ್ಯವಸ್ಥಾಪಕ ಶ್ರೀನಿವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ್, ತಾಪಂ ಮಾಜಿ ಅಧ್ಯಕ್ಷ ಮರಿದ್ಯಾವೇಗೌಡ, ಕಲಸಿಂದ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಜ್ಞಾನೇಶ್, ಮುಖಂಡರಾದ ಪಾಲಾಕ್ಷ, ಉಮೇಶ್ ಇದ್ದರು.

# ರಸ್ತೆ ಕಾಮಗಾರಿಗೆ ಭೂಮಿ ಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು:ಸಮಾಜ ಕಲ್ಯಾಣ ಇಲಾಖೆಯ ಅನುದಾನದಲ್ಲಿ ಪರಿಶಿಷ್ಟ ಜನಾಂಗದ ಕಾಲೋನಿಗಳ ಅಭಿವೃದ್ಧಿ ಕೈಗೊಂಡಿದ್ದೇವೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು. ಚೀಲನಾಯ್ಕನಹಳ್ಳಿ ಗ್ರಾಮದಲ್ಲಿ ಶನಿವಾರ ಸಂಜೆ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.


10 ಲಕ್ಷ ವೆಚ್ಚದಲ್ಲಿ ಚೀಲನಾಯ್ಕನಹಳ್ಳಿ ಪರಿಶಿಷ್ಟ ಜನಾಂಗದ ಕಾಲೋನಿಯ ಕಾಂಕ್ರೀಟ್ ರಸ್ತೆ ಕಾಮಗಾರಿ ಕೈಗೊಳ್ಳಲಾಗಿದೆ. ಗುಣಮಟ್ಟದ ಕಾಮಗಾರಿ ಕೈಗೊಳ್ಳುವಂತೆ ಎಂಜಿನಿಯರ್ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದ್ದೇವೆ ಎಂದರು. ಕಾಲೋನಿಗಳ ರಸ್ತೆ, ಚರಂಡಿ ಅಭಿವೃದ್ಧಿಗೆಷಗಮನ ಹರಿಸಲಾಗಿದೆ. ಶೈಕ್ಷಣಿಕ ಪ್ರಗತಿಗೂ ಒತ್ತು ನೀಡಿದ್ದೇವೆ. ನರಸೀಪುರ ಬೋವಿ ಕಾಲೋನಿಯ ಸಮಾಜ ಕಲ್ಯಾಣ ಇಲಾಖೆ ವಸತಿ ಶಾಲೆ ಕಟ್ಟಡ ಕಾಮಗಾರಿ ಮುಕ್ತಾಯ ಹಂತದಲ್ಲಿದೆ ಎಂದರು.

# ನವೀನ ತಂತ್ರಜ್ಞಾನದ ಪೇಟೆಂಟ್ ಅರ್ಜಿ ಪ್ರಕಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಂಗಳೂರು : ಹಾಸನ ಮೂಲದ ಖ್ಯಾತ ವೈದ್ಯ ಡಾ.ಎಚ್. ಹಾರೂನ್ ಅವನ್ನೊಳಗೊಂಡ ಕಸ್ತೂರ್ಬಾ ವೈದ್ಯಕೀಯ ಕಾಲೇಜು (ಕೆಎಂಸಿ), ಮಂಗಳೂರಿನ ವೈದ್ಯರು ಮತ್ತು ವಿದ್ಯಾರ್ಥಿಗಳ ತಂಡವು ರಿಯಲ್-ಟೈಮ್ ಪ್ರಿ-ಹಾಸ್ಪಿಟಲ್ ಎಮರ್ಜೆನ್ಸಿ ಮಾನಿಟರಿಂಗ್ ಸಿಸ್ಟಮ್ ಅಂಡ್ ಮೆಥಡ್ ಎಂಬ ಶೀರ್ಷಿಕೆಯ ನವೀನ ತಂತ್ರಜ್ಞಾನಕ್ಕಾಗಿ ಪೇಟೆಂಟ್‌ಗೆ ಅರ್ಜಿ ಸಲ್ಲಿಸಿದ್ದು, ಇದು ಜುಲೈ 11, ರಂದು ಪ್ರಕಟವಾಗಿದೆ.

ಈ ತಂತ್ರಜ್ಞಾನವು ರೋಗಿಯು ಆಸ್ಪತ್ರೆಗೆ ತಲುಪುವ ಮೊದಲೇ ರಿಯಲ್-ಟೈಮ್ ಶಾರೀರಿಕ ಮಾನಿಟರಿಂಗ್, ಸ್ವಯಂಚಾಲಿತ ಕ್ಲಿನಿಕಲ್ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಡೈನಾಮಿಕ್ ಆಸ್ಪತ್ರೆ ರೂಟಿಂಗ್ ಸಾಮರ್ಥ್ಯವನ್ನು ಒದಗಿಸುತ್ತದೆ. ಇದು ತುರ್ತು ಚಿಕಿತ್ಸೆಯ ವಿತರಣೆಯನ್ನು ಕ್ರಾಂತಿಕಾರಿಯಾಗಿ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ.



**ತಂಡದ ಸದಸ್ಯರು**

- ಡಾ. ಹಾರೂನ್ ಎಚ್ : ಜನರಲ್ ಮೆಡಿಸಿನ್ ವಿಭಾಗ
- ಡಾ. ಸಮೀನಾ ಎಚ್ : ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ
- ಶ್ರೀ ಶುಭಂ ಭೂಸಾರಿ (ಎಂಬಿಬಿಎಸ್ 2021)
- ಕು. ಸ್ನೇಹಲ್ ಮಹಿಮಾ ಕ್ಯಾಸ್ಟೆಲಿನೊ (ಎಂಬಿಬಿಎಸ್ 2022)
- ಶ್ರೀ ಆಯುಷ್ ಗಣೇಶ್ ಐಯರ್ (ಎಂಬಿಬಿಎಸ್ 2022)

ಈ ಸಂಶೋಧನೆಯು ಕೆಎಂಸಿ ಮಂಗಳೂರಿನ ಶೈಕ್ಷಣಿಕ ಮತ್ತು ವೈದ್ಯಕೀಯ ಸಂಶೋಧನೆಗಳ ಮಹತ್ವವನ್ನು ದೃಢಪಡಿಸಿದೆ. ಈ ತಂತ್ರಜ್ಞಾನವು ತುರ್ತು ವೈದ್ಯಕೀಯ ಸೇವೆಗಳ ಗುಣಮಟ್ಟವನ್ನು ಉನ್ನತೀಕರಿಸುವ ನಿರೀಕ್ಷೆಯಿದೆ.

# ಸೇವಾ ಭಾವನೆಗೆ ಅಹಂ ಅಡ್ಡಿಯಾಗದಿರಲಿ: ಚುಂಚಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಗುರುಗಳು ನಮಗೆಲ್ಲ ಜ್ಞಾನವೆಂಬ ದೀಪ ನೀಡಿದ್ದಾರೆ, ಅದಕ್ಕೆ ಎಣ್ಣೆ, ಬತ್ತಿ ಹಾಕಿ ಜ್ಞಾನಜ್ಯೋತಿ ಬೆಳಗುವ ಮೂಲಕ ದಾರಿ ದೀಪ ನೀಡಿದ ಗುರುಗಳನ್ನು ಸ್ಮರಿಸುವ ಕೆಲಸ ವಾಗಬೇಕೆಂದು ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರದ ಆದಿಚುಂಚನಗಿರಿ ಮಠದಲ್ಲಿ ಶುಕ್ರವಾರ ಸಂಜೆ ನಡೆದ ಗುರು ತೋರಿದ ತಿಂಗಳ ಮಾಮನ ತೇರು 130ನೇ ಹುಣ್ಣಿಮೆ ಕಾರ್ಯಕ್ರಮ, ಗುರುಪೂರ್ಣಿಮೆ ಹಾಗೂ ಗುರುಸ್ಮರಣಾ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಅನ್ನದಾನ ಮಹಾದಾನವಾದರೆ, ವಿದ್ಯಾದಾನ ಶ್ರೇಷ್ಠವಾದ ದಾನ.ಅನ್ನ ಕ್ಷಣಿಕ ತೃಪ್ತಿ ನೀಡಿದರೆ, ಜ್ಞಾನ ನಮ್ಮ ಬದುಕಿನ ಹಲವರ ಹಸಿವನ್ನು ನೀಗಿಸುತ್ತದೆ ಎಂದು ಹೇಳಿದರು.

ಮನುಷ್ಯ ಜನ್ಮವನ್ನು ಯಾರೂ ನೀಡಿಲ್ಲ, ನಾವೇ ಪಡೆದು ಕೊಂಡು ಬಂದಿದ್ದೇವೆ. ಹೀಗಾಗಿ ನಮ ಬದುಕಿನ ಕತ್ತಲೆಯನ್ನು ಜ್ಞಾನದ ಬೆಳಕಿನ ಮೂಲಕ ಸರಿಸಬೇಕು.

ಲೌಕಿಕ ಜಗತ್ತಿನ ಮಾಯೆಯ ಪರದೆಯನ್ನು ಸರಿಸಿ, ಜಗತ್ತಿನ ಮಹಾ ಸ್ವರೂಪ ತಿಳಿಸುವುದನ್ನು ನಮಗೆ ಹಲವು ಮಹನೀಯರು ತಿಳಿಸಿ ಕೊಟ್ಟಿದ್ದಾರೆ. ಅಂತವರನ್ನು ನಾವೆಲ್ಲ ನೆನಪು ಮಾಡಿ ಕೊಳ್ಳಬೇಕೆಂದು ತಿಳಿಸಿದರು.

ಬೈಬಲ್, ಖುರಾನ್, ಭಗವದ್ಗೀತೆ, ವೇದ-ಉಪನಿಷತ್‌ಗಳು

ಈ ಜಗತ್ತಿನ ಕಾರುಣ್ಯ ರೂಪವನ್ನು ತಿಳಿಸಿಕೊಟ್ಟಿವೆ. ವ್ಯಾಸ ಮಹರ್ಷ, ತುಳಿಸಿ ದಾಸರು, ರಾಮದಾಸರು, ಬಸವಣ್ಣ, ಅಕ್ಕಮಹಾದೇವಿ ಸೇರಿ ಹಲವರ ರೀತಿಯಲ್ಲಿ ಗುರುಗಳು ನಮ್ಮ ಬದುಕಿನಲ್ಲಿ ಬಂದು ನಮಲ್ಲಿರುವ ಅಂಧಕಾರವನ್ನು ದೂರ ಮಾಡಿದ್ದಾರೆ.

ಪ್ರಕೃತಿ ಸುಂದರವಾದ ಎಲ್ಲವನ್ನು ಕೊಟ್ಟು ಮತ್ತೆ ಅದನ್ನೆಲ್ಲ ಕಿತ್ತುಕೊಳ್ಳುತ್ತದೆ. ನಮ್ಮ ದೇಹದ ಸ್ಥಿತಿಯೂ ಹಾಗೆಯೇ ವಯಸ್ಸಿನಲ್ಲಿ ಸುಂದರವಾಗಿ ಕಾಣಿಸುತ್ತೇವೆ. ನಂತರ ಎಲ್ಲವನ್ನು ಕಳೆದು ಕೊಳ್ಳುತ್ತೇವೆ ಇದನ್ನು ನಾವೆಲ್ಲ ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದರು.

ಕೆಲ ಸಾಧಕರು ಸಾಧನೆ ಹತ್ತಿರ ಬಂದು ಕೊನೆಯಲ್ಲಿ ಎಡವುತ್ತಾರೆ. ಗುರುಗಳು ನೀಡುವ ಜ್ಞಾನದ ದೀಪವನ್ನು ಈ ಪ್ರಪಂಚದಲ್ಲಿರುವ ಕಾಡುಪ್ರಾಣಿಗಳನ್ನು ದಾಟಿ ಅರಿವಿನ ದಡ ಸೇರಿಸುವ ಪ್ರಯತ್ನ ಮಾಡಬೇಕಿದೆ.

ಯಾವುದೇ ಅಪೇಕ್ಷೆ ಇಲ್ಲದೆ ಮಠಗಳು, ಸಮಾಜದ ನಿಷ್ಕಲ್ಮಶ ಸೇವೆ ಆರಂಭಿಸಬೇಕು. ಸೇವೆಗೆ ಅಹಂಕಾರ ಬರಬಾರದು ಎಂದು ಸಲಹೆ ನೀಡಿದರು.

ಸೇವೆ, ಭಕ್ತಿ ಇದ್ದರೆ ಸಾಲದು ಜ್ಞಾನ ಬೇಕು. ಈ ಮೂರು ಹಂತವನ್ನು ಎಲ್ಲರೂ ಪಾಲನೆ ಮಾಡಬೇಕು. ಈ ಮಾರ್ಗವನ್ನು ಅನುಸರಿಸಿದ ನಂತರ ಮುಂದೇನು ಎಂದು ಪ್ರಶ್ನೆ ಮಾಡಿ ಕೊಂಡರೆ ಮುಕ್ತಿಯನ್ನು ಕಾಣಬಹುದು ಎಂದು ತಿಳಿಸಿದರು.

ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಮಾತನಾಡಿ, ನಮ್ಮ ಬದುಕಿನಲ್ಲಿ ಬರುವ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಗುರುವಾಗಿರುತ್ತಾರೆ. ನಾಥ ಪರಂಪರೆಯ ಆದಿಚುಂಚನಗಿರಿ ಮಠದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ನಮಗೆಲ್ಲ ಮಹಾ ಗುರುವಾಗಿದ್ದಾರೆ.

ನಮ್ಮಲ್ಲಿ ದೇಶದಲ್ಲಿ ಹಲವು ಧರ್ಮಗಳಿದ್ದರೂ ಎಲ್ಲಾ ಧರ್ಮಗಳಲ್ಲಿ ಮೊದಲಿಗೆ ಗುರುವಿಗರ ನಮನ ಎಂದು ಹೇಳಲಾಗುತ್ತದೆ.

ವೇದವ್ಯಾಸರು ಸೇರಿ ಹಲವು ಋಷಿ ಮುನಿಗಳು ಗುರುವಾಗಿ ಅಜ್ಞಾನ ನಾಶಮಾಡಿ ಜ್ಞಾನ ನೀಡಿದ್ದಾರೆ ಎಂದರು.

ಶ್ರೀ ಮಹಂತ ಶಿವಲಿಂಗ ಸ್ವಾಮೀಜಿ, ಶ್ರೀ ಶಿವಯ್ಯ ಸ್ವಾಮೀಜಿ, ಸ್ವತಂತ್ರ ಬಸವಲಿಂಗ ಸ್ವಾಮೀಜಿ, ಶ್ರೀ ಮಲ್ಲೇಶಸ್ವಾಮೀಜಿ, ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಶ್ರೀ ನಿಶ್ಚಲ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಗುರುನಾಥ ಸ್ವಾಮೀಜಿ, ಶಿವಪುತ್ರ ಸ್ವಾಮೀಜಿ ಮತ್ತಿತರರು ಹಾಜರಿದ್ದರು.

## ಗೌತಮ ಬುದ್ಧನಾದ ಸಿದ್ಧಾರ್ಥನಿಗೆ ಉತ್ತಮ ಶಿಕ್ಷಣ

ಭೋಗದ ಜೀವನ, ರಾಜ್ಯ ಎಲ್ಲಮೂ ಸಿಕ್ಕಿದ ನಂತರ ಬೇರೇನು ಬೇಕು ಎಂದು ಹುಡುಕಿಕೊಂಡು ಹೋಗುತ್ತಾನೆ. ತಾಯಿಯೊಂದಿಗೆ ಮಗು ಜಾತ್ರೆಗೆ ಹೋಗಿ ಅಲ್ಲಿ ತನಗೆ ಬೇಕಾದ ಎಲ್ಲಾ ಆಟಿಕೆಗಳನ್ನು ಪಡೆದುಕೊಂಡರೂ ತಾಯಿ ಕಾಣಿಸದಿದ್ದಾಗ ಅವೆಲ್ಲವನ್ನು ಬಿಟ್ಟು ತನ್ನ ತಾಯಿಗಾಗಿ ಹುಡುಕಾಟ ನಡೆಸುತ್ತದೆ. ಅದೇ ರೀತಿ ನಾವು ಎಲ್ಲವನ್ನು ಪಡೆದುಕೊಂಡ ನಂತರ ಮುಂದೇನು ಎಂಬುದನ್ನು ಪ್ರಶ್ನೆ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ನಿರ್ಮಲನಾನಂದನಾಥ ಸ್ವಾಮೀಜಿ ಹೇಳಿದರು.

# ಕಾರ್ಲೆ ಮೊಗಣ್ಣಗೌಡ ವಕೀಲರ ಸಂಘದ ಜಿಲ್ಲಾಧ್ಯಕ್ಷರಾಗಿ ಆಯ್ಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಜಿಲ್ಲಾ ವಕೀಲರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜಿಲ್ಲಾ ಅಧ್ಯಕ್ಷರಾಗಿ ಕಾರ್ಲೆ ಮೊಗಣ್ಣಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಎಚ್. ಆರ್. ಒಂಬೇಶ್, ಉಪಾಧ್ಯಕ್ಷರಾಗಿ ಎಂ.ಟಿ. ತಿಮ್ಮೇಗೌಡ, ಜಂಟಿ ಕಾರ್ಯದರ್ಶಿಯಾಗಿ ಎ.ಜೆ. ರಘು, ಖಜಾಂಚಿಯಾಗಿ ಜಿ.ಎನ್. ಸುಗುಣ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಗಳಾದ ಎಚ್.ಪಿ. ಪರಮೇಶ್ ಮತ್ತು ಚನ್ನಂಗಿಹಳ್ಳಿ ಶ್ರೀಕಾಂತ್ ತಿಳಿಸಿದ್ದಾರೆ.

ಈ ಚುನಾವಣೆಯಲ್ಲಿ ಅಧ್ಯಕ್ಷರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಗಂಗಮ್ಮ 201 ಮತ ಪಡೆದರೆ, ಕಾರ್ಲೆ ಮೊಗಣ್ಣಗೌಡರು 508 ಮತ ಪಡೆದು ಭಾರಿ ಅಂತರದಿಂದ ಜಯಶೀಲರಾದರು.

ಉಪಾಧ್ಯಕ್ಷರ ಚುನಾವಣೆಯಲ್ಲಿ ಎ.ಎಸ್.ಯತೀಶ್ 289 ಅವರ ವಿರುದ್ಧ ಎಂ.ಟಿ. ತಿಮ್ಮೇಗೌಡರು 417 ಮತ ಪಡೆದು ಜಯಶಾಲಿಯಾಗಿದ್ದಾರೆ. ಜಂಟಿ ಕಾರ್ಯದರ್ಶಿ ಹುದ್ದೆಯಲ್ಲಿ ಎ.ಜೆ ರಘು ಕೇವಲ 5 ಮಾತುಗಳ ಅಂತರದಿಂದ ವಿಜಯಶಾಲಿ ಆದರು. ಇದೇ ವೇಳೆ ವಕೀಲರ ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು.

# ಮಕ್ಕಳು ಕಣ್ಣಿನ ಆರೋಗ್ಯ ರಕ್ಷಿಸಿಕೊಳ್ಳಲು ಆದ್ಯತೆ ನೀಡಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹೇಮಾವತಿ ನಗರದ ಎಲೈಟ್ ಶಾಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗಾಗಿ ಆಯೋಜಿಸಲಾಗಿದ್ದ ವಾರ್ಷಿಕ ಉಚಿತ ಕಣ್ಣಿನ ತಪಾಸಣೆ ಶಿಬಿರ ಯಶಸ್ವಿಯಾಗಿ ನಡೆಯಿತು.

ಶಾಲೆಯ ಆಡಳಿತ ಮಂಡಳಿ ಕಾರ್ಯದರ್ಶಿ ಕಿರಣ್ ಎಚ್.ಪಿ. ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಕಣ್ಣು ಮಾನವನ ಅತ್ಯಂತ ಸೂಕ್ಷ್ಮ ಅಂಗವಾಗಿದ್ದು, ಪ್ರತಿವರ್ಷ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಅದರ ಸಂರಕ್ಷಣೆಗೆ ಆದ್ಯತೆ ನೀಡಬೇಕೆಂದು ಹೇಳಿದರು.

ಶಾಲೆಯ ಆಡಳಿತ ಮಂಡಳಿ ಖಜಾಂಚಿ ಸಪ್ನಕಿರಣ್ ಮಾತನಾಡಿ, ಕಣ್ಣಿನ ಪ್ರಾಮುಖ್ಯತೆ ಮತ್ತು ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳಿಗೆ ತಿಳಿವಳಿಕೆ ನೀಡಿದರು.

ಸುನಂದ ಕಣ್ಣಿನ ಆಸ್ಪತ್ರೆಯ ತಜ್ಞರಾದ ಡಾ. ಸುಶ್ಮಿತಾ, ಡಾ.ನವೀನ್ ಮತ್ತು ತಂಡದವರು 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಪೋಷಕರ ಕಣ್ಣಿನ ತಪಾಸಣೆ ನಡೆಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತಾಧಿಕಾರಿ ನಾಗರಾಜು ಕೆ.ಎಂ., ಪ್ರಾಂಶುಪಾಲರು, ಶಿಕ್ಷಕರು, ಪೋಷಕರು, ಬೋಧಕ/ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮುದ್ದೆಂಬ ಮಾಯಾಮೃಗ

– ಚೇತನ್ ಗುರೂಜಿ



ಪರಮಾತ್ಮ ಮಾನವನನ್ನು ಸೃಷ್ಟಿಸಿದ ಮನುಜ ಮುದ್ದನ್ನು ಕಂಡುಹಿಡಿದ,

ಹೇಗೆ ಪರಮಾತ್ಮನಿಗೆ ಮನುಜನನ್ನು ಕಂಡರೆ ಪ್ರೀತಿಯೋ ಹಾಗೆಯೇ ಮಾನವನಿಗೆ ತಾನೇ ಕಂಡುಹಿಡಿದಿದ್ದನ್ನು ಕಂಡರೆ ಮುದ್ದು. ಯಾರಾದರೂ ಕೊಂಚ ಮೈಗೆ ಹುಷಾರಿಲ್ಲವೆಂದರೆ ಮೊದಲ ಪ್ರಶ್ನೆ ಏನು ಔಷಧಿ ತೆಗೆದುಕೊಂಡೆ? ಒಳ್ಳೆಯ ಡಾಕ್ಟರಿಗೆ ತೋರಿಸು ಸಲಹೆ ಪ್ರತಿಯೊಂದು ರೋಗಕ್ಕೂ ಒಂದೊಂದು ಔಷಧವಿರಲೇಬೇಕೆಂಬುದು ಮನುಷ್ಯನ ತೀರ್ಮಾನ, ಊಟವನ್ನಾದರೂ ಬಿಡಿ ಈ ಔಷಧವನ್ನು ತಪ್ಪಿಸಬೇಡಿ ಎಂಬ ಹಂತವನ್ನು ತಲುಪಲು ಅವನ ಮದ್ದಿನ ಮನಸ್ಸೇ ಕಾರಣವಾಗಿದೆ ರೋಗಿಯು ಕೇಳುತ್ತಾನೆಂದು ವೈದ್ಯರು ಔಷಧಿ ಕೊಡುತ್ತಾರೆ ವೈದ್ಯ ಔಷಧಿ ಕೊಡುತ್ತಾನೆ ಎಂದು ರೋಗಿ ಉಪಯೋಗಿಸುತ್ತಾನೆ ವಿಷಚಕ್ರ. ಇದಕ್ಕೆ ಕಾರಣರಾರು? ಮೊದಲ ಕಾರಣ ಆಧುನಿಕ ಮಾನವ! ಹಿಂದೆ ಮೊದಲು ಮಂತ್ರ, ತಂತ್ರ ನಂತರ ಔಷಧ ಎಂಬ ನಂಬಿಕೆ ಇತ್ತು.

ಔಷಧವನ್ನು ಕಂಡುಕೊಂಡ ಮೇಲೆ ಪೂರ್ಣ ಅವಲಂಬನೆ ಅದರ ಮೇಲೆ ಆಯಿತು ಭಾರತದಲ್ಲಿಯೂ ಹಾಗೆಯೇ ಮಣಿ- ಮಂತ್ರ ಔಷಧಿ ಎಂಬುದೇ ವೇದ ವಾಕ್ಯವಾಗಿತ್ತು ಔಷಧಿ ಮನುಷ್ಯನು ತಿನ್ನಬಹುದಾಗಿದ್ದ ಗಿಡ ಮೂಲಿಕೆಗಳೇ ಆಗಿದ್ದವು ನಂತರದ ದಿನಗಳಲ್ಲಿ ತಿನ್ನಲು ಕಹಿಯಾದ ಅಥವಾ ಸಾಮಾನ್ಯ ಆಹಾರವಲ್ಲದ ನಾರು ಬೇರುಗಳು ಔಷದಗಳ ಪಟ್ಟಿಗೆ ಸೇರಿದವು ಔಷಧವಾಗದ ಗಿಡವಿಲ್ಲ ಎಂಬ ತೀರ್ಮಾನಕ್ಕೆ ಬಂದಾಯಿತು ಲೋಹಗಳನ್ನು ಕಂಡುಹಿಡಿದ ಮೇಲೆ ಅವುಗಳ ಭಸ್ಮಗಳು ಔಷಧಗಳ ಸಂಸ್ಕಾರಕ್ಕೆ ಸೇರಿದವು

ಎಲ್ಲಾ ಲೋಹಗಳನ್ನು ಚಿನ್ನವಾಗಿ ಪರಿವರ್ತಿಸುವ ಪ್ರಕ್ರಿಯೆಯಲ್ಲಿದ್ದ ಜನರು ಗಂಧಕ ರಂಜಕ ಮುಂತಾದವುಗಳನ್ನು ಸಹ ಔಷಧಗಳಾಗಿ ಪರಿವರ್ತಿಸಿದರು ಈಗ ಆಧುನಿಕ ವಿಜ್ಞಾನದ ಸಹಾಯದಿಂದ ಎಲ್ಲಾ ರಾಸಾಯನಿಕಗಳು ಔಷಧಗಳಾದವು. ಹಿಂದೆ ನಿಧಾನವೇ ಪ್ರಧಾನ ವಾಗಿತ್ತು ಆದರೆ ಈಗ?

ಇದು ರಾಕೆಟ್ ಯುಗ ಇಲ್ಲಿ ವೇಗಕ್ಕೆ ಅತಿ ಮಹತ್ವ ನಮ್ಮ ನಿತ್ಯ ಜೀವನದಲ್ಲಿ ಪ್ರತಿಯೊಂದುಕ್ಕೂ ಅವಸರ, ಕ ದಿಡೀರ್ ದೋಸೆ, ಕುರಿ ಬೇಗ ಬಲಿಯಬೇಕು, ಕೋಳಿ ಹುಟ್ಟಿದ ತಕ್ಷಣ ಮೊಟ್ಟೆಯಿಡಬೇಕು. ಬೀಜ ಮಾಳೆತ್ತು ಮೂರು ದಿನಕ್ಕೆ ತೆನೆ ನೀಡಬೇಕು ಆರೋಗ್ಯ ರಂಗದಲ್ಲಂತೂ ಈ ದಿಡೀರನ ಬಯಕೆ ಮರಳಿ ಬಾರದ ಮಾರ್ಗದತ್ತ ಕೊಂಡೊಯ್ಯುತ್ತಿದೆ, ಮೂಸಿ ನೋಡಿದ ಕ್ಷಣ ನೆಗಡಿ ಮಾಯ, ಮುಟ್ಟಿದೊಡನೆ ನೋವು ಗಯಬ್, ಸ್ಪ್ರೇಯರ್ ನಿಂದ ಪುಸ್ - ಪುಸ್ ಮಾಡಿಕೊಂಡ ತಕ್ಷಣ ಉಸ್ ಅಪ್ಪ ಹೋಗಿ ಟಿಓಯ್ ಓಯ್‌ಟಿ ಎನ್ನಬೇಕು ಹೀಗೆ ಸಾಗಿದೆ ನಮ್ಮ ಶ್ರೀಸಾಮಾನ್ಯನ ಅಪೇಕ್ಷೆ. ವೇಗದ ಬದುಕಿನಲ್ಲಿ ಓಡುತ್ತಿರುವ ಮನುಜ ತನ್ನ ಕೈಯಾರೆ ತಾನೇ ರೋಗದ ಗುಂಡಿಗೆ ಬಿದ್ದು ತನ್ನ ಸಮಾಧಿಯನ್ನು ತಾನೇ ತೋಡಿಕೊಂಡಿದ್ದಾನೆ ಹಾಗಾದರೆ ಈ ದಿಡೀರ್ ಸಂಸ್ಕೃತಿಯೇ ಈಗಿನ ಮಾಂತ್ರಿಕ ಮದ್ದಿನ ಮಾತೆ. ಔಷಧಿ ಕುಡಿದೊಡನೆ ಮ್ಯಾಜಿಕ್ ಮಾಡಿದಂತೆ ರೋಗ ವಾಸಿಯಾಗಬೇಕು.

# ಶಿಕ್ಷಣ ಯಾರ ಸೊತ್ತೂ ಅಲ್ಲ-ಅವಕಾಶ ಮುಖ್ಯ : ಸಿ.ಎಂ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೆಂಗಳೂರು : ಶೇ100 ರಷ್ಟು ಅಂಕಗಳನ್ನು ಪಡೆಯುವುದರಲ್ಲಿ ಹೆಣ್ಣುಮಕ್ಕಳೇ ಮುಂದಿದ್ದು, ಸೈನ್ಯದಲ್ಲಿ , ಅಂತರಿಕ್ಷದಲ್ಲೂ ಹೆಣ್ಣು ಮಕ್ಕಳು ಕೆಲಸ ಮಾಡುತ್ತಿರುವುದು ಮಹಿಳಾ ಕುಲದ ಪ್ರಗತಿಯ ಪ್ರತೀಕ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ರಾಣಿ ಅಹಲ್ಯಾ ಬಾಯಿ ಹೋಳ್ಕರ್ ಅವರ 300ನೇ ಜನ್ಮ ದಿನಾಚರಣೆ ಕಾರ್ಯಕ್ರಮವವನ್ನು ಉದ್ಘಾಟಿಸಿ ಮಾತನಾಡಿದರು.

ಯಾವುದೇ ಸಂಘಟನೆ 25 ವರ್ಷ ಪೂರೈಸಿದರೆ ಅದು ದೊಡ್ಡ ಯಶಸ್ಸು . ಕರ್ನಾಟಕ ರಾಜ್ಯ ಅಹಲ್ಯಾ ಬಾಯಿ ಹೋಳ್ಕರ್ ಮಹಿಳಾ ಸಂಘ ಅತ್ಯಂತ ಯಶಸ್ವಿ ಆಗಿದೆ. ಇದಕ್ಕಾಗಿ ಶ್ರಮಿಸಿದ ಯಲ್ಲಮ್ಮ ಮತ್ತು ಜೊತೆಗಿರುವ ಪ್ರತಿಯೊಬ್ಬರೂ ಅಭಿನಂದನಾರ್ಹರು ಎಂದರು.

ಶಿಕ್ಷಣ-ಸಂಘಟನೆ-ಹೋರಾಟ ಅಂಬೇಡ್ಕರ್ ಅವರು ಶೋಷಿತ ಜಾತಿ-ಸಮುದಾಯಗಳಿಗೆ ಕೊಟ್ಟಿರುವ ಮಂತ್ರ. ಶೂದ್ರರು ಮತ್ತು ಮಹಿಳೆಯರು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು. ಆದರೆ ಅಂಬೇಡ್ಕರ್ ಅವರ ಕಾರಣದಿಂದ ಶೂದ್ರ ಮತ್ತು ಮಹಿಳಾ ಕುಲಕ್ಕೆ ಶಿಕ್ಷಣ ಕಲಿಯುವ ಅವಕಾಶ ಒದಗಿ ಬಂತು. ಇದಕ್ಕೆ ನಮ್ಮ ಸಂವಿಧಾನ ನೀಡಿದ ಕಡ್ಡಾಯ ಶಿಕ್ಷಣ ಕಾನೂನು ನೆರವಾಯಿತು ಎಂದರು.

ಕುರುಬರಿಗೆ ಅಕ್ಷರ ಹತ್ತಲ್ಲ, ಶಿಕ್ಷಣ ಏಕೆ ಎಂದು ನಮ್ಮ ಅಜ್ಜಿ ಹೇಳುತ್ತಿದ್ದರು. ಆದರೆ, ನಾನು ಶಾಲೆಗೆ ಹೋಗಿ ಕಾನೂನು ಪದವಿ ಪಡೆದು ಮುಖ್ಯಮಂತ್ರಿಯೂ ಆದೆ. ನಾನು ಶಾಲೆಗೆ ಹೋಗಿ ಶಿಕ್ಷಣ ಕಲಿಯುವ ಅವಕಾಶ ಉಪಯೋಗಿಸಿಕೊಳ್ಳದಿದ್ದರೆ ನಾನೂ ಹಸು, ಕುರಿ ಕಾಯುತ್ತಾ ಇರಬೇಕಾಗಿತ್ತು. ಆದ್ದರಿಂದ ರಾಣಿ ಅಹಲ್ಯಾ ಬಾಯಿ ಅವರ ಶಿಕ್ಷಣ ಕ್ರಾಂತಿ ಎಲ್ಲರಿಗೂ ಈ ಮಹಿಳಾ ಸಂಘಟನೆಗೂ ಪ್ರೇರಣೆ ಆಯಿತು. ಇತಿಹಾಸ ಗೊತ್ತಿಲ್ಲದವರು ಭವಿಷ್ಯ ರೂಪಿಸಲು ಸಾಧ್ಯವಿಲ್ಲ ಎಂದರು.

ರಾಣಿ 20 ವರ್ಷ ಅಧಿಕಾರದಲ್ಲಿದ್ದರೂ ತನ್ನ ಸಾಮ್ರಾಜ್ಯ ಉಳಿಸಲು ಅಗತ್ಯವಾದ ಎಲ್ಲಾ ಅರ್ಹತೆಗಳನ್ನು ಬೆಳೆಸಿಕೊಂಡಿದ್ದರೂ ಸಾಮ್ರಾಜ್ಯ ವಿಸ್ತರಿಸುವ ಹಪಾಹಪಿ ಇರಲಿಲ್ಲ. ಖಜಾನೆ ತುಂಬಿದ್ದರೂ ಸರಳ ಜೀವನ ನಡೆಸುತ್ತಾ, ಸುಸ್ಥಿರ ಆಡಳಿತ, ಅಭಿವೃದ್ಧಿ ಕಡೆ ಹೆಚ್ಚಿನ ಗಮನ ಹರಿಸಿದ್ದ ರಾಣಿ ಅಹಲ್ಯಾ ಬಾಯಿ ಅವರು ಬಾಲ್ಯ ವಿವಾಹ ನಿಲ್ಲಿಸುವ ಮೂಲಕ ಸಾಮಾಜಿಕ ಬದಲಾವಣೆಯಲ್ಲೂ ಪ್ರಮುಖ ಪಾತ್ರ ವಹಿಸಿದರು ಎಂದರು.

ಜಾತ್ಯತೀತ ಮನೋಭಾವ ಹೊಂದಿದ್ದ ಅಹಲ್ಯಾ ಬಾಯಿ ಆಗಲೇ ಅಂತರ್ಜಾತಿ ವಿವಾಹ ಮಾಡಿಸಿದ್ದರು ಎಂದು ವಿವರಿಸಿದರು.

ಶಿಕ್ಷಣ ಪಡೆದು ಆರ್ಥಿಕವಾಗಿ ಸಾಮಾಜಿಕವಾಗಿ ಸಭಲರಾದರೆ ಮಾತ್ರ ಅಸಮಾನತೆ ಅಳಿಸಿ ಸಾಮಾಜಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದರು.

ನಮ್ಮ ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳಿಂದ ಯಾರೂ ಸೋಮಾರಿಗಳಾಗುವುದಿಲ್ಲ. ಬದಲಿಗೆ ಸಾಮಾಜಿಕವಾಗಿ ಸಬಲರಾಗುತ್ತಾರೆ ಎಂದರು.

# ಯಾದಗಿರಿ: ಸೆಲ್ಫಿ ತೆಗೆಯುವ ನೆಪದಲ್ಲಿ ಗಂಡನನ್ನು ಕೃಷ್ಣಾನದಿಗೆ ತಳ್ಳಿದ ಪತ್ನಿ!

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಯಾದಗಿರಿ: ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನ ಗುರ್ಜಾಪುರ ಸೇತುವೆ ಬಳಿ ಗಂಡ-ಹೆಂಡತಿಯ ನಡುವೆ ನಡೆದ ಕಿರಿಕ್‌ನಿಂದ ಆಘಾತಕಾರಿ ಘಟನೆಯೊಂದು ನಡೆದಿದೆ. ವಡಗೇರಾದಿಂದ ರಾಯಚೂರಿನತ್ತ ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿಗಳು ಸೇತುವೆಯ ಬಳಿ ಸೆಲ್ಫಿ ತೆಗೆಯಲು ನಿಂತಿದ್ದಾರೆ. ಈ ವೇಳೆ ಪತ್ನಿಯೊಬ್ಬಳು ತನ್ನ ಗಂಡನನ್ನು ಕೃಷ್ಣಾನದಿಗೆ ತಳ್ಳಿದ್ದಾಳೆ ಎಂಬ ಆರೋಪ ಕೇಳಿಬಂದಿದೆ.

ನಾಟಕೀಯ ರಕ್ಷಣೆ: ಗಂಡ ಕೃಷ್ಣಾನದಿಗೆ ಬಿದ್ದರೂ, ಈಜುತ್ತಾ ನದಿಯಲ್ಲಿದ್ದ ಕಲ್ಲುಬಂಡೆಯ ಮೇಲೆ ಕುಳಿತು ಕೂಗಾಡಿ ಸ್ಥಳೀಯರ ಗಮನ ಸೆಳೆದಿದ್ದಾನೆ. ಸ್ಥಳೀಯರು ತಕ್ಷಣ ಸ್ಪಂದಿಸಿ, ಹಗ್ಗದ ಸಹಾಯದಿಂದ ಸಿನಿಮೀಯ ಶೈಲಿಯಲ್ಲಿ ಗಂಡನನ್ನು ಸುರಕ್ಷಿತವಾಗಿ ರಕ್ಷಿಸಿದ್ದಾರೆ. ಕಾಲು ಜಾರಿತು ಎಂಬ ಕಥೆ: ಘಟನೆಯ ಬಳಿಕ ಪತ್ನಿ ತನ್ನ ತವರು ಮನೆಗೆ ಫೋನ್ ಮಾಡಿ, ಗಂಡನ ಕಾಲು ಜಾರಿ ನದಿಗೆ ಬಿದ್ದ ಎಂದು ಕಥೆ ಕಟ್ಟಲು ಯತ್ನಿಸಿದ್ದಾಳೆ ಎಂದು ತಿಳಿದುಬಂದಿದೆ. ಆದರೆ, ಗಂಡನ ರಕ್ಷಣೆಯಾದ ಬಳಿಕ ಈ ಘಟನೆಯ ನಿಜವಾದ ಕಾರಣದ ಬಗ್ಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಪೊಲೀಸ್ ತನಿಖೆ: ಈ ಘಟನೆ ವಡಗೇರಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಈ ಘಟನೆ ಸ್ಥಳೀಯರಲ್ಲಿ ತೀವ್ರ ಆಘಾತ ಮೂಡಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

# ಪತ್ರಕರ್ತರ ಶೆಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಯಶಸ್ವಿ





ಹಾಸನ: ನಗರದ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಕ್ರೀಡಾಕೂಟದ ಅಂಗವಾಗಿ ಇಂದು ಶೆಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ನಡೆಯಿತು.

ಆಟ ಆಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಮಹಾನಗರಪಾಲಿಕೆ ಮೇಯರ್ ಎಂ.ಚಂದ್ರೇಗೌಡ, ಪತ್ರಕರ್ತರು ಕ್ರೀಡಾಕೂಟದ ಮೂಲಕ ಕೆಲಸದ ಜೊತೆಗೆ ಆರೋಗ್ಯವೂ ಮುಖ್ಯ ಎಂಬ ಸಂದೇಶ ರವಾನಿಸಿದ್ದೀರಿ ಎಂದರು.

ಹಿಂದೆ ರಾಜ್ಯ ಮಟ್ಟದ ಕ್ರೀಡಾಕೂಟ ಆಯೋಜನೆ ಮಾಡಿದ್ದೀರಿ. ಬಳಿಕ ಕೆಸರು ಗದ್ದೆ ಆಟೋಟ, ಇಂದು ಶೆಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜನೆ ಮಾಡಿರುವುದು ಸ್ವಾಗತಾರ್ಹ.

ಈ ಮೂಲಕ ದೇಶಿ ಕ್ರೀಡೆಯನ್ನು ಉಳಿಸಿ ಬೆಳೆಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದೀರಿ ಎಂದು ಶ್ಲಾಘಿಸಿದರು. ಪತ್ರಕರ್ತರು ಸಮಾಜದ ಸ್ವಾಸ್ಥ್ಯ ಕಾಪಾಡಲು ಕೊಡುಗೆ ನೀಡುವುದರ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆಯಿಂದ ಸಾಧ್ಯ ಎನ್ನುವ ಸಂದೇಶವನ್ನು ಕೊಟ್ಟಿದ್ದೀರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕ್ರೀಡೆಗಳು ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿ. ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ಈ ರೀತಿಯ ಕ್ರೀಡಾಕೂಟಗಳನ್ನು ಆಗಾಗ ಆ ಯೋಜನೆ ಮಾಡಿ ತಮ್ಮ ಆರೋಗ್ಯ ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಪ್ರತಿ ವರ್ಷ ಪತ್ರಕರ್ತರ ದಿನಾಚರಣೆ ಹಿನ್ನೆಲೆಯಲ್ಲಿ ನಡೆಸುವ ಕ್ರೀಡಾ ಕೂಟಗಳು ಒಳ್ಳೆಯ ಬೆಳವಣಿಗೆ ನಮ್ಮ ಮಹಾನಗರ ಪಾಲಿಕೆ ವತಿಯಿಂದ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧರಿದ್ದೇವೆ ಎಂದು ಭರವಸೆ ನೀಡಿದರು.

ಜಿಲ್ಲಾ ವಾರ್ತಾಧಿಕಾರಿ ಮೀನಾಕ್ಷಿಮ್ಮ ಮಾತನಾಡಿ, ಪತ್ರಕರ್ತರು ಎಂದರೇ ಯಾವ ಸಮಯದಲ್ಲೂ ವಿರಾಮವೇ ಇರುವುದಿಲ್ಲ. ದಿನದ 24 ಗಂಟೆಗಳ ಕಾಲ ಕೆಲಸ ಮಾಡುತ್ತಲೆ ಇರುತ್ತಾರೆ. ಯಾವ ಸಂಕಷ್ಟ ಪರಿಸ್ಥಿತಿಯಲ್ಲೂ ಕೆಲಸ ಮಾಡಲೇಬೇಕು. ಇಂತಹ ಒತ್ತಡದಲ್ಲೂ ಕೂಡ ಪ್ರತಿವರ್ಷ ಪತ್ರಿಕಾ ದಿನಾಚರಣೆ ಅಂಗವಾಗಿ ಇಂತಹ ಕ್ರೀಡಾಕೂಟ ಹಮ್ಮಿಕೊಂಡಿರುವುದು ಸಂತೋಷದ ವಿಷಯ. ಎಲ್ಲರೂ ಒಂದು ಕುಟುಂಬದಂತೆ ಕ್ರೀಡಾಕೂಟದಲ್ಲಿ ಭಾಗವಹಿಸಿ, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ನೆರವಾಗುವ ಈ ಕ್ರೀಡಾಕೂಟದಲ್ಲಿ ಸಂತೋಷದಿಂದ ಪಾಲ್ಗೊಳ್ಳಿ. ಸೋಲು ಗೆಲುವನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ಈ ಕ್ರೀಡಾಕೂಟ ಯಶಸ್ವಿಯಾಗಲಿ ಎಂದು ಇದೇ ವೇಳೆ ಶುಭ ಹಾರೈಸಿದರು.

ರಾಜ್ಯ ಪತ್ರಕರ್ತರ ಸಂಘದ ವಿಶೇಷ ಪ್ರತಿನಿಧಿ ರವಿ ನಾಕಲಗೂಡು ಮಾತನಾಡಿ, ಶಿವಾನಂದ ತಗಡೂರು, ಕೆ.ಆರ್.ಮಂಜುನಾಥ್ ಅವರು ಚಾಲನೆ ನೀಡಿದ ಕ್ರೀಡಾಕೂಟವನ್ನು ಕಳೆದ 20 ವರ್ಷಗಳಿಂದ ಪ್ರತಿವರ್ಷ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದೇವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಹೆಚ್. ವೇಣುಕುಮಾರ್, ಕೆಲ ದಿನಗಳ ಹಿಂದೆ ಕೆಸರು ಗದ್ದೆ ಕ್ರೀಡಾಕೂಟ ಏರ್ಪಡಿಸಿದ್ದು, ಯಶಸ್ವಿಯಾಗಿ ನಡೆದಿದೆ. ಇಂದು ಶೆಟಲ್ ಬ್ಯಾಡ್ಮಿಂಟನ್ ಏರ್ಪಡಿಸಿದ್ದು, ಮುಂದಿನ ದಿನಗಳಲ್ಲಿ ಕ್ರಿಕೆಟ್ ಪಂದ್ಯಾವಳಿ ಏರ್ಪಡಿಸಲು ತೀರ್ಮಾನಿಸಲಾಗಿದೆ ಎಂದರು.ನಂತರ ಪತ್ರಿಕಾ ದಿನಾಚರಣೆ ಆಚರಿಸಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಲೀಲಾವತಿ, ಕೆ.ಆರ್. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಬಿ.ಸಿ. ಶಶಿಧರ್, ಉಪಾಧ್ಯಕ್ಷ ಮೋಹನ್ ಕುಮಾರ್, ಕೆ.ಎಂ.ಹರೀಶ್, ಖಜಾಂಚಿ ಕುಮಾರ್, ಕಾರ್ಯದರ್ಶಿ ಪಿ.ಎ. ಶ್ರೀನಿವಾಸ್, ಸಿ.ಬಿ. ಸಂತೋಷ್ ಹಾಗೂ ಜಿಲ್ಲೆಯ ಇತರೆ ತಾಲೂಕಿನ ಅಧ್ಯಕ್ಷರು ಪದಾಧಿಕಾರಿಗಳು, ಪತ್ರಕರ್ತರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶರತ್-ಅಕ್ಬರ್, ಮಂಜು ಬನವಾಸೆ-ನವೀನ್ ಜೋಡಿ ಪ್ರಥಮ

ಎ ವಿಭಾಗದಲ್ಲಿ ಶರತ್ ಹೆಚ್.ಎಸ್ ಮತ್ತು ಅಕ್ಬರ್ ಜುನೈದ್ ಜೋಡಿ ಪ್ರಥಮ ಬಹುಮಾನ ಪಡೆದರೆ, ಅತೀಖುರ್ ರೆಹಮಾನ್ ಮತ್ತು ನಂದನ್ ಜೋಡಿ ದ್ವಿತೀಯ ಸ್ಥಾನ ಪಡೆಯಿತು. ರವಿ ನಾಕಲಗೂಡು-ನಟರಾಜ್ ಜೋಡಿ ತೃತೀಯ ಸ್ಥಾನ ಪಡೆಯಿತು.

ಬಿ ವಿಭಾಗದಲ್ಲಿ ಮಂಜು ಬನವಾಸೆ-ನವೀನ್ ಆಲೂರು ಜೋಡಿ ಪ್ರಥಮ ಸ್ಥಾನ ಪಡೆದರೆ, ಗಿರೀಶ್ ದೇಶಾಣಿ-ಮೋಹನ್ ಕುಮಾರ್ ಜೋಡಿ ದ್ವಿತೀಯ ಮತ್ತು ಬ್ಯಾಕರವಳ್ಳಿ ವೆಂಕಟೇಶ್-ಸಂದೀಪ್ ಜೋಡಿ ತೃತೀಯ ಸ್ಥಾನ ಪಡೆದುಕೊಂಡಿದೆ.

ಮಹಿಳೆಯರ ವಿಭಾಗದಲ್ಲಿ ಜನಮಿತ್ರ ಡಿಜಿಟಲ್ ವಿಭಾಗದ ಪುಷ್ಪಾ ಜೆ.ಎಂ. ಓಬಳಾಪುರ ಪ್ರಥಮ ಮತ್ತು ಪೂಜಾ ರಘು ದ್ವಿತೀಯ ಸ್ಥಾನ ಪಡೆದರು.

# ಇತಿಹಾಸದಲ್ಲಿ ಈ ದಿನ

## ಜುಲೈ-13

1837 : ಕ್ವೀನ್ ವಿಕ್ಟೋರಿಯಾ ಲಂಡನ್‌ನಲ್ಲಿ ತನ್ನ ಮೊದಲ ಪಬ್ಲಿಕ್ ಭಾಷಣ ನೀಡಿದರು.

1923 : ಹಾಲಿ ಫಕ್ಸ್ ದುರಂತ: ಕೆನಡಾದ ನವಸ್ಕೋಟಿಯಾದ ಹಾಲಿಫಕ್ಸ್‌ನಲ್ಲಿ ಹೊಗೆ ಮತ್ತು ಹೊತ್ತಿ ಉರಿದ ಅಗ್ನಿದುರಂತದಲ್ಲಿ ಸುಮಾರು 48 ಜನರು ಸಾವಿಗೀಡಾದರು.

1977 : ನ್ಯೂಯಾರ್ಕ್ ನಗರದಲ್ಲಿ ಭಾರೀ ವಿದ್ಯುತ್ ವ್ಯತ್ಯಯ: ಈ ಬ್ಲ್ಯಾಕ್‌ಔಟ್ 25 ಗಂಟೆಗಳ ಕಾಲ ಇತ್ತು.

2011 : ಮುಂಬೈ (ಭಾರತ) ನಲ್ಲಿ ಮೂರು ಸ್ಫೋಟಗಳು: 26 ಜನ ಮೃತರು, 130 ಕ್ಕೂ ಹೆಚ್ಚು ಜನರು ಗಾಯಗೊಂಡರು.

### ಜನನಗಳು

100 ಬಿಸಿ.ಇ. : ಗಾಯಸ್ ಜೂಲಿಯಸ್ ಸಿಸರ್ (ಉಚಿ ಎಟ ಅಚಿಚಿಡಿ), ರೋಮನ್ ಸೇನೆಧಿಪತಿ ಮತ್ತು ರಾಜಕೀಯ ನಾಯಕ (ಅಂದುಕೊಂಡಿತ್ತೆಂದು ಇತಿಹಾಸಕಾರರು ಸೂಚಿಸುತ್ತಾರೆ).

1886 : ಸ್ಟಾನ್ಲಿ ಸ್ಪೆನ್ಸ ರ್, ಬ್ರಿಟಿಷ್ ಕಲಾವಿದ.

1942 : ಹರಿತೋಷ್ ಚಟರ್ಜಿ, ಭಾರತೀಯ ಚಲನಚಿತ್ರ ನಿರ್ದೇಶಕ.

### ಮರಣಗಳು

1954 : ಫ್ರಿಡಾ ಕಾಹ್ಲೋ, ಮೆಕ್ಸಿಕನ್ ಚಿತ್ರಶಿಲ್ಪಿ (ಜನನ: 1907).

2008 : ಲೆಸ್‌ಲಿ ನೈಲ್‌ಸೆನ್, ಪ್ರಸಿದ್ಧ ಹಾಸ್ಯ ನಟ (ಕ್ಯಾನಡಾ ಮೂಲದ; ಜನನ: 1926).

# ಪೊಲೀಸರ ವಿರುದ್ಧ ತನಿಖೆ : ನ್ಯಾ.ಕುನ್ಹಾ ಆಯೋಗ ಶಿಫಾರಸು

ಬೆಂಗಳೂರು: ರಾಜ್ಯ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಿದ್ದ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ ಸಂಬಂಧ ಕರ್ತವ್ಯ ನಿರ್ಲಕ್ಷ್ಯ ತೋರಿದ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶಿಸಬೇಕೆಂದು ಮೈಕಲ್ ಕುನ್ಹಾ ನೇತೃತ್ವದ ಆಯೋಗ ಶಿಫಾರಸು ಮಾಡಿದೆ. ಪ್ರಕರಣ ಸಂಬಂಧ ರಾಜ್ಯ ಸರ್ಕಾರ ನೇಮಕ ಮಾಡಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕಲ್ ಕುನ್ಹಾ ನೇತೃತ್ವದ ಆಯೋಗ ಸಲ್ಲಿಸಿರುವ ವರದಿಯಲ್ಲಿ ಪ್ರಮುಖವಾಗಿ ಕಾಲ್ತುಳಿತಕ್ಕೆ ಪೊಲೀಸರ ನಿರ್ಲಕ್ಷ್ಯವೇ ಕಾರಣ ಎಂಬುದನ್ನು ಪತ್ತೆ ಮಾಡಿದೆ. ಕರ್ತವ್ಯ ನಿರ್ವಹಣೆ ಮಾಡುವಲ್ಲಿ ಲೋಪವೆಸಗಿರುವ ಪೊಲೀಸರು ಮೇಲಾಧಿಕಾರಿಗಳ ಮೇಲೆ ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶ ನೀಡಬೇಕೆಂದು ಶಿಫಾರಸು ಮಾಡಲಾಗಿದೆ. ಕ್ರೀಡಾಂಗಣದ ಒಳಗೆ 79 ಪೊಲೀಸರು ಮಾತ್ರ ಇದ್ದರು. ಹೊರಗೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರು ಇರಲಿಲ್ಲ. ತುರ್ತು ವಾಹನ, ಆಂಬುಲೆನ್?ಸ ವ್ಯವಸ್ಥೆ ಅಪೂರ್ಣವಾಗಿತ್ತು. 3:25ಕ್ಕೆ ಕಾಲ್ತುಳಿತ ಸಂಭವಿಸಿದ್ದರೂ. 5:30ರವರೆಗೆ ಪೊಲೀಸ್ ಕಮಿಷನರ್‌ಗೆ ಮಾಹಿತಿ ಇಲ್ಲ. 4 ಗಂಟೆಗೆ ಜಂಟಿ ಪೊಲೀಸ್ ಆಯುಕ್ತರು ಕ್ರೀಡಾಂಗಣಕ್ಕೆ ಬಂದಿದ್ದರು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ದೊಡ್ಡ ಮಟ್ಟದ ಕಾರ್ಯಕ್ರಮವನ್ನು ಮಾಡಿದ್ದು ಸರಿಯಲ್ಲ. ಗೇಟ್‌ಗಳು ಅತ್ಯಂತ ಚಿಕ್ಕದಾಗಿವೆ. ಕ್ರೀಡಾಂಗಣದಲ್ಲಿ ಫೈರ್ ಸೇಫ್ಟಿ ವ್ಯವಸ್ಥೆ ಇರಲಿಲ್ಲ. 1,650 ಪೊಲೀಸ್ ಅಧಿಕಾರಿಗಳು ಭದ್ರತೆಗೆ ನಿಯೋಜನೆ ಆಗಿತ್ತು ಎಂಬುದು ಸುಳ್ಳು. 800ಕ್ಕಿಂತ ಕಡಿಮೆ ಜನರ ಭದ್ರತೆಗೆ ನಿಯೋಜನೆ ಆಗಿದ್ದರು ಎಂದು ವರದಿಯಲ್ಲಿ ಬಹಿರಂಗಗೊಂಡಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248